# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 17-03-2021 ಪ್ರಶ್ನೆ ಸಂಖ್ಯೆ : 1256 (1259)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 17-03-2021

ಉತ್ತರಿಸುವ ಸಚಿವರು : ಕಂದಾಯ ಸಚಿವರು

ವಿಷಯ : 11 ಇ ಸ್ಕೆಚ್ ಪ್ರಕ್ರಿಯ ಪೂರ್ಣಗೊಳಿಸುವ ಬಗ್ಗೆ

(ಅ) ಕಂದಾಯ ಇಲಾಖೆಯಿಂದ ರೈತರಿಗೆ ಮಂಜೂರಾದ ಜಮೀನುಗಳನ್ನು ದುರಸ್ಥಿ ಮಾಡುವ ಪ್ರಕ್ರಿಯೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ವ್ಯಕ್ತಿ ದುರಸ್ಥಿ ಮಾಡಲು ಅರ್ಜಿ ಪಡೆದು ಮೂನಾಲ್ಕು ವರ್ಷಗಳಾದರೂ 1 ರಿಂದ 5, 6 ರಿಂದ 11 ಹಾಗೂ 11ಇ ಪ್ರಕ್ರಿಯೆ ಪೂರ್ಣವಾಗದೆ ರೈತರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ರಾಗಿ ಬೊಮ್ಮನಹಳ್ಳಿ ಸರ್ವೆ ನಂ.267ರಲ್ಲಿ 1.13.00 ಗುಂಟೆ ದುರಸ್ಥಿಗಾಗಿ ಅರ್ಜಿ ಸಲ್ಲಿಸಿ 3 ವರ್ಷಗಳಾದರೂ ಪ್ರಕ್ರಿಯೆ ಪೂರ್ಣವಾಗಿರುವುದಿಲ್ಲ ಕಾರಣಗಳೇನು;

(ಈ) ಇತ್ತೀಚೆಗೆ ದುರಸ್ಥಿ ಪ್ರಕ್ರಿಯೆಯನ್ನು ಆನ್‌ಲೈನ್ ಮಾಡಿದ್ದು ಈ ಬಗ್ಗೆ ಕಂದಾಯ ಅಧಿಕಾರಿಗಳಿಗೆ ಸೂಕ್ತ ತರಬೇತಿ ಇಲ್ಲದೆ ವಿಳಂಬವಾಗುತ್ತಿದೆ; ಈ ಬಗ್ಗೆ ತರಬೇತಿ ನೀಡಲು ಏನು ಕ್ರಮವಹಿಸಲಾಗುತ್ತದೆ; (ವಿವರ ಒದಗಿಸುವುದು)

(ಉ) ಒಟ್ಟಾರೆ ಈ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?